# ಬಡವರ 'ಸಂಜೀವಿನಿ'

ಹಾಸನ ಜಿಲ್ಲೆಯ ಬಡವರ ಪಾಲಿನ ಆಸ್ಪತ್ರೆ ಎಂದೇ ಜನಜನಿತವಾದ 'ಸಂಜೀವಿನಿ ಸಹಕಾರಿ ಆಸ್ಪತ್ರೆ'ಗೆ ಈಗ 34ರ ಹರೆಯ. 1986ರ–87ರ ಅವಧಿಯಲ್ಲಿ ಬಡವರಿಗೆ ಕಡಿಮೆ ವೆಚ್ಚದಲ್ಲಿ ಆರೋಗ್ಯ ಸೇವೆ ಒದಗಿಸುವ ಉದ್ದೇಶದಿಂದ ಷೇರು ಧನ ₹2,10,500 (1,285 ಜನರಿಂದ ತಲಾ ₹ 525) ಮೊತ್ತದಲ್ಲಿ 20 ಹಾಸಿಗೆ ಆಸ್ಪತ್ರೆ ಆರಂಭಗೊಂಡಿತು.

ವರ್ಷಗಳು ಕಳೆದಂತೆ ದಾನಿಗಳ ನೆರವಿನಿಂದ ಸ್ವಂತ ಕಟ್ಟಡ ಹೊಂದಿ, 2010ರಲ್ಲಿ ₹ 5.5 ಕೋಟಿ ವೆಚ್ಚದಲ್ಲಿ ಏಳು ಅಂತಸ್ತಿನ 150 ಹಾಸಿಗೆ ಆಸ್ಪತ್ರೆಯಾಗಿ ತಲೆಯೆತ್ತಿದೆ. ತಜ್ಞ ವೈದ್ಯರು ಸೇರಿ 107 ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಿಬ್ಬಂದಿಗೆ ಆರೋಗ್ಯ ವಿಮೆ, ಪಿಎಫ್, ಇಎಸ್ಐ ಸೌಲಭ್ಯ ನೀಡಲಾಗಿದೆ. ಆಸ್ಪತ್ರೆಗೆ ಹೊರರೋಗಿ ವಿಭಾಗದಲ್ಲಿ ನಿತ್ಯ 120ರಿಂದ 150 ರೋಗಿಗಳು ಚಿಕಿತ್ಸೆ ಪಡೆದರೆ, ಒಳರೋಗಿ ವಿಭಾಗದಲ್ಲಿ 80 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ.

80ರ ದಶಕದಲ್ಲಿಯೇ ಜಿಲ್ಲಾ ಕೇಂದ್ರದಲ್ಲಿದ್ದ ಸರ್ಕಾರಿ ಆಸ್ಪತ್ರೆಗೆ ಹಾಸನ ಮಾತ್ರವಲ್ಲದೇ ಪಕ್ಕದ ಚಿಕ್ಕಮಗಳೂರು, ಮಂಡ್ಯ, ತುಮಕೂರಿನ ಗಡಿ ಭಾಗದಿಂದ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದರು. ಸರಿಯಾದ ಸಮಯಕ್ಕೆ ಚಿಕಿತ್ಸೆ ದೊರೆಯದೆ ರೋಗಿಗಳು ನರಳುತ್ತಿದ್ದರು. ಖಾಸಗಿ ನರ್ಸಿಂಗ್ ಹೋಂಗಳಲ್ಲಿನ ದುಬಾರಿ ಚಿಕಿತ್ಸಾ ವೆಚ್ಚ ಅವರ ಕೈಗೆಟುಕುತ್ತಿರಲಿಲ್ಲ. ಇದನ್ನು ಮನಗಂಡ ಜನಕಲ್ಯಾಣ ರಿಸರ್ಚ್ ಆ್ಯಂಡ್ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿಗಳಾದ ಡಾ. ಗುರುರಾಜ್ ಹೆಬ್ಬಾರ್, ಡಾ. ಎ.ಸಿ. ಮುನಿವೆಂಕಟೇಗೌಡ, ಡಾ. ಎ. ನಾಗರಾಜು, ಆರ್. ಜನಾರ್ದನ್, ವೈ.ಎಸ್. ವೀರಭದ್ರಪ್ಪ, ಎಚ್.ಎಸ್. ಪ್ರಕಾಶ್, ಬಿ.ವಿ. ಕರೀಗೌಡ ಹಾಗೂ ಇತರರು ಸಭೆ ಸೇರಿ ಜಿಲ್ಲಾದಾದ್ಯಂತ ಷೇರು ಧನ ಸಂಗ್ರಹಿಸಿದರು.

ಕೆ.ಆರ್.ಪುರಂನಲ್ಲಿರುವ ಬಿ.ಜಿ.ಷಡಾಕ್ಷರಯ್ಯ ಅವರ ಬಾಡಿಗೆ ಕಟ್ಟಡದಲ್ಲಿ 20 ಹಾಸಿಗೆಯ 'ಸಂಜೀವಿನಿ ಸಹಕಾರಿ ಆಸ್ಪತ್ರೆ' ಉದಯವಾಯಿತು. ಆಸ್ಪತ್ರೆ ಆಡಳಿತ ಮಂಡಳಿ ಮೊದಲ ಅಧ್ಯಕ್ಷರಾಗಿ ಡಾ. ಎ.ಸಿ. ಮುನಿವೆಂಕಟೇಗೌಡ ಆಯ್ಕೆಯಾದರು. 1988ರ ಮಾರ್ಚ್ 16ರಂದು ಅಂದಿನ ರಾಜ್ಯಪಾಲರಾದ ವೆಂಕಟಸುಬ್ಬಯ್ಯ ಆಸ್ಪತ್ರೆಯನ್ನು ಸಾರ್ವಜನಿಕ ಸೇವೆಗೆ ಸಮರ್ಪಿಸಿದರು.

ದಿನ ಕಳೆದಂತೆ ರೋಗಿಗಳ ಸಂಖ್ಯೆ ಹೆಚ್ಚಾಗತೊಡಗಿತು. 1991ರಲ್ಲಿ ಸರಸ್ವತಿಪುರಂನಲ್ಲಿನ ಬಾಡಿಗೆ ಕಟ್ಟಡದಲ್ಲಿ ಸಂಜೀವಿನಿ ಸಹಕಾರಿ ಆಸ್ಪತ್ರೆಯ 60 ಹಾಸಿಗೆಯ ಮತ್ತೊಂದು ಶಾಖೆ ತೆರೆಯಲಾಯಿತು. ಕ್ರಮೇಣ ಸ್ವಂತ ಕಟ್ಟಡ ಹೊಂದುವ ಮೂಲಕ ಪ್ರಸ್ತುತ 100 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿದೆ.

ರಾಜ್ಯ ಸರ್ಕಾರ ಷೇರು ರೂಪದಲ್ಲಿ ನೀಡಿದ ₹28,65,000 ಷೇರು ಧನವನ್ನು ಹಂತ ಹಂತವಾಗಿ ಮರುಪಾವತಿಸಲಾಗುತ್ತಿದೆ. ಸಂಸ್ಥೆ ಪ್ರತಿ ವರ್ಷ ಗಳಿಸಿದ ಆದಾಯವನ್ನು ಆಸ್ಪತ್ರೆಯ ಅಭಿವೃದ್ಧಿಗೆ ವಿನಿಯೋಗಿಸಲಾಗುತ್ತಿದೆ.

ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರು, ಮೈಸೂರು ನಗರಗಳಿಗೆ ರೋಗಿಗಳು ಚಿಕಿತ್ಸೆಗೆ ಹೋಗಬೇಕಾದರೆ ಕಾರುಗಳಿಗೆ ದುಬಾರಿ ಬಾಡಿಗೆ ನೀಡಬೇಕಾಗಿತ್ತು. ಆಗ ಪ್ರಥಮ ಬಾರಿಗೆ 24x7 ಆಂಬುಲೆನ್ಸ್ ಸೇವೆ ಆರಂಭಿಸಲಾಯಿತು. ಅಲ್ಲದೇ ಶವ ಸಾಗಿಸಲು ಕಾರಿಗೆ ದುಬಾರಿ ಹಣ ವ್ಯಯ ಮಾಡುವುದನ್ನು ತಪ್ಪಿಸಲು ಸಂಸ್ಥೆ ವತಿಯಿಂದಲೇ ಶಾಂತಿವಾಹನ ಸೌಲಭ್ಯ ಒದಗಿಸಿ, ಕನಿಷ್ಠ ದರ ನಿಗದಿ ಪಡಿಸಲಾಗಿದೆ.

ಸಂಸ್ಥೆ ಅಡಿ ಬೇಲೂರು ರಸ್ತೆಯಲ್ಲಿ ಎಚ್. ಡಿ.ದೇವೇಗೌಡ ಕೋ ಆಪರೇಟಿವ್ ಕಾಲೇಜು ಆಫ್ ನರ್ಸಿಂಗ್, ಎಚ್.ಡಿ.ದೇವೇಗೌಡ ಕೋ ಆಪರೇಟಿವ್ ಪ್ಯಾರಾಮೆಡಿಕಲ್ ಸೈನ್ಸ್ ಕಾಲೇಜು ತೆರೆದು, ಬಿಎಸ್‌ಸಿ, ಎಂಎಸ್‌ಸಿ ನರ್ಸಿಂಗ್, ಪ್ಯಾರಾ ಮೆಡಿಕಲ್, ಕ್ಷ ಕಿರಣ, ಹೆಲ್ತ್ ಇನ್‌ಸ್ಪೆಕ್ಟರ್ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. ಪ್ರಯೋಗಾಲಯ, ಸುಸಜ್ಜಿತ

ಕಡೆಗಳಲ್ಲಿ ಸಹಕಾರಿ ಆಸ್ಪತ್ರೆಗಳು ಜನರಿಗೆ ಆರೋಗ್ಯ ಸೇವೆಯನ್ನು ನೀಡುತ್ತಿವೆಯಾದರೂ ಕೇರಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರಿ ಆಸ್ಪತ್ರೆಗಳು ಯಶಸ್ವಿ ಮಾದರಿಯನ್ನು ನಿರ್ಮಿಸಿವೆ. ಹಾಗೆಂದು ಅವು ಬಹಳ ಹಳೆಯ ಆಸ್ಪತ್ರೆಗಳೇಂದೇನಲ್ಲ. 'ಪೆರಿಯಾರಂ ಆಸ್ಪತ್ರೆ'ಯಲ್ಲಿ ಮೆಡಿಕಲ್ ಕಾಲೇಜು ಕೂಡ ಇದೆ. 1995ರಲ್ಲಿ ಆರಂಭವಾದ ಆ ಕಾಲೇಜು ಇಂದು ಕೇರಳದ ಯಶಸ್ವಿ ಮೆಡಿಕಲ್ ಕಾಲೇಜುಗಳಲ್ಲೊಂದು.

ತೇಜಸ್ವಿನಿ ಕೊ. ಆಪರೇಟಿವ್ ಆಸ್ಪತ್ರೆ, ಮಲಪ್ಪುರಂನ ಇಎಂಎಸ್ ಸ್ಮಾರಕ ಸ್ಮಾರಕ ಸಹಕಾರಿ ಆಸ್ಪತ್ರೆ, ಎಕೆಜಿ ಸ್ಮಾರಕ ಸಹಕಾರಿ ಆಸ್ಪತ್ರೆ, ತೆಲಿಶ್ಶೆರಿ ಸಹಕಾರಿ ಆಸ್ಪತ್ರೆ, ಇಂದಿರಾಗಾಂಧಿ ಸಹಕಾರಿ ಆಸ್ಪತ್ರೆ, ತಳಿಪರಂಬು ಸಹಕಾರಿ ಆಸ್ಪತ್ರೆ, ಪಯ್ಯನೂರು ಸಹಕಾರಿ ಆಸ್ಪತ್ರೆ, ತ್ರಿಶ್ಯೂರು ಸಹಕಾರಿ ಆಸ್ಪತ್ರೆ, ಇರಿಂಜಾಲಕುಡ ಸಹಕಾರಿ ಆಸ್ಪತ್ರೆ, ತ್ರಿಕ್ಕರ ಗ್ರಾಮ ಪಂಚಾಯಿತಿ ಸಹಕಾರಿ ಆಸ್ಪತ್ರೆ, ಸಿ . ಅಚ್ಯುತ ಮೆನನ್ ಸಹಕಾರಿ ಆಸ್ಪತ್ರೆ, ಕೋಳಿಕ್ಕೋಡ್ ಜಿಲ್ಲಾ ಸಹಕಾರಿ ಆಸ್ಪತ್ರೆ ಹೀಗೆ ಕೇರಳದ ವಿವಿಧ ಭಾಗಗಳಲ್ಲಿ ಸಹಕಾರಿ ಆರೋಗ್ಯ ಕ್ಷೇತ್ರ ಸಕ್ರಿಯವಾಗಿದೆ.

### ರೋಗ ಇದ್ದರಷ್ಟೇ ಚಿಕಿತ್ಸೆ

ಕರ್ನಾಟಕದ ಮಂಗಳೂರಿನಲ್ಲೂ ಸಹಕಾರಿ ಆಸ್ಪತ್ರೆಯಿದೆ. ಸಹಕಾರಿ ಮಾದರಿಯ ಆಸ್ಪತ್ರೆ ಹೇಗೆ ಕಾರ್ಯ ನಿರ್ವಹಿಸುತ್ತದೆ ಎಂಬ ಉದಾಹರಣೆಯನ್ನು ಮಂಗಳೂರಿನ ಸಹಕಾರಿ

